
ಪುಸ್ತಕ ಪರಿಚಯ

# ಶ್ರೀ ವಿದ್ಯಾರಣ್ಯರ ಜೀವನ್ಮುಕ್ತಿವಿವೇಕ




*ಕೃತಿ :* **ಜೀವನ್ಮುಕ್ತಿವಿವೇಕ**
*ಲೇಖಕರು :* **ಸ್ವಾಮಿ ಹರ್ಷಾನಂದ**
*ಪ್ರಕಾಶಕರು :* **ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020**
*ಪುಟಗಳು :* **384** *ಬೆಲೆ :* **175/-**

ಶ್ರೀ ವಿದ್ಯಾರಣ್ಯ ಮುನಿಗಳ ಸುಪ್ರಸಿದ್ಧ ಅದ್ವೈತ ಕೃತಿ **'ಜೀವನ್ಮುಕ್ತಿವಿವೇಕ'**ದ ಕನ್ನಡಾನುವಾದ ಸಹಿತ ಆವೃತ್ತಿಯನ್ನು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ರಚಿಸಿದ್ದು, ಅದರ ನಾಲ್ಕನೇ ಮುದ್ರಣವನ್ನು ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಇತ್ತೀಚೆಗೆ ಪ್ರಕಟಿಸಿದೆ. ಸ್ವಾಮಿ ಆದಿದೇವಾನಂದರು ೧೯೬೭ರ ಪ್ರಥಮ ಮುದ್ರಣಕ್ಕೆ ಬರೆದ ಉಪೋದ್ಘಾತ, ಲೇಖಕರ 'ಬಿನ್ನಹ', ಉದ್ಧೃತ ಶ್ಲೋಕಗಳ ಅನುಕ್ರಮಣಿಕೆಗಳಿಂದ ಅಲಂಕೃತವಾದ ಈ ಹೊಸ ಆವೃತ್ತಿಯಲ್ಲಿ ಸ್ಫುಟವಾದ ಮುದ್ರಣ, ಉತ್ತಮ ರಕ್ಷಾಕವಚ (ಕ್ಯಾಲಿಕೊ) ಹಾಗೂ ಸುಂದರ ರಕ್ಷಾಪುಟಗಳಿದ್ದು, ದೀರ್ಘಕಾಲ ಅಧ್ಯಯನ ಮಾಡುವ ಓದುಗರಿಗೆ ಅನುಕೂಲಕರವಾಗಿದೆ. ಬಹಳ ಕಾಲದಿಂದ ಅನುಪಲಬ್ಧವಾಗಿದ್ದ ಈ ಕೃತಿಯು ಈಗ ಸುಲಭ ಬೆಲೆಗೆ, ಆಕರ್ಷಕ ರೂಪದಲ್ಲಿ ಲಭ್ಯವಾಗಿದೆ.

ಉಪೋದ್ಘಾತದಲ್ಲಿ ಈ ಕೃತಿಯ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ:

''ಜೀವನಮುಕ್ತಿವಿವೇಕವು ಲಲಿತವೂ ಸರಳವೂ ಆದ ಗದ್ಯಶೈಲಿಯಲ್ಲಿ ಬರೆಯಲ್ಪಟ್ಟ ಗ್ರಂಥ. ಮೊದಲಿನಿಂದ ಕೊನೆಯವರೆಗೆ ಸ್ವರಸವಾದ ಸಪ್ರಮಾಣವಾದ ಶ್ಲೋಕರತ್ನಗಳನ್ನು ಗ್ರಂಥಕರ್ತೃಗಳು ಉದಾಹರಿಸಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ವಿಷಯವು ಪುರಾತನವಾಗಿದ್ದರೂ ವಿದ್ಯಾರಣ್ಯಯತಿಗಳು ತೋರಿಸಿರುವ ಹಾದಿ ಹೊಸದಾಗಿದೆ; ಅನೇಕ ಕಡೆಗಳಲ್ಲಿ ಮನಃಶ್ಶಾಸ್ತ್ರ ದೃಷ್ಟಿಯಿಂದ ಆಂತರಿಕ ಜಗತ್ತಿನ ವಿಶ್ಲೇಷಣವನ್ನು ಮಾಡಿರುತ್ತಾರೆ. ಸ್ವಯಂ ಸಂನ್ಯಾಸಿಗಳಾಗಿರುವ ವಿದ್ಯಾರಣ್ಯರು ಮುಕ್ತಿಗೆ ಸಂನ್ಯಾಸವೇ ಕಾರಣ ಎಂಬ ಮೂಲಭಾವನೆಯನ್ನು ಪ್ರಕಟಗೊಳಿಸಿ ವಿಷಯವನ್ನು ಪ್ರಾರಂಭಿಸುತ್ತಾರೆ. ಸಂನ್ಯಾಸಕ್ಕೆ ನಾನಾ ವಿಧವಾದ ಅರ್ಥಗಳಿದ್ದರೂ ವಿದ್ಯಾರಣ್ಯರಿಗೆ ಒಂದೇ ಒಂದು ಅರ್ಥವಿದೆ; ಸಾಂಪ್ರದಾಯಿಕವಾದ ಪಾರಮಾರ್ಥಿಕವಾದ ಸಂನ್ಯಾಸ; ದಂಡ-ಕಮಂಡಲು-ಕಾಷಾಯಾದಿಗಳನ್ನು ಧರಿಸಿ, ಸರ್ವ-ಕರ್ಮ-ಸಂನ್ಯಾಸ ಮಾಡಿ ಆತ್ಮಲೋಕದಲ್ಲಿಯೇ ಶರಣುವನ್ನು ಹೊಂದಬೇಕು. ಸಂನ್ಯಾಸವು ಎರಡು ಬಗೆಯಾಗಿರುತ್ತದೆ: ವಿವಿದಿಷಾಸಂನ್ಯಾಸ, ವಿದ್ವತ್ಸಂನ್ಯಾಸ; ಮೊದಲನೆಯದು ಎರಡನೆಯದಕ್ಕೆ ಪೂರ್ವಭಾವಿಯಾದ ಅವಸ್ಥೆಯಾಗಿರುತ್ತದೆ. ಶ್ರವಣ-ಮನನ-ನಿದಿಧ್ಯಾಸನಗಳನ್ನು ಅನುಷ್ಠಾನ ಮಾಡುವುದರ ಮೂಲಕ ಪರತತ್ತ್ವವನ್ನು ಅರಿತವರು ಮಾಡುವ ಸಂನ್ಯಾಸವು ವಿದ್ವತ್ಸಂನ್ಯಾಸವು. ಮೊದಲನೆಯದಕ್ಕೆ ಶಾಸ್ತ್ರವಿಧಿಯನ್ನು ಅನುಸರಿಸಬೇಕು. ಎರಡನೆಯದಕ್ಕೆ ವಿಧಿನಿಷೇಧಗಳಿಲ್ಲ. ಸ್ತ್ರೀಯರಿಗೂ ಸಂನ್ಯಾಸಕ್ಕೆ ಅರ್ಹತೆ ಇದೆ ಎಂಬ ಮತವನ್ನು ಪ್ರತಿಪಾದಿಸಿರುವುದು ಈ ಗ್ರಂಥದ ಒಂದು ವಿಶೇಷೋಕ್ತಿ (ಪುಟ ೯).

''ಈ ಗ್ರಂಥವು ಐದು ಪ್ರಕರಣಗಳನ್ನು ಒಳಗೊಂಡಿದೆ; ಜೀವನ್ಮುಕ್ತಿಪ್ರಮಾಣ, ವಾಸನಾಕ್ಷಯ, ಮನೋನಾಶ, ಸ್ವರೂಪಸಿದ್ಧಿಪ್ರಯೋಜನ ಮತ್ತು ವಿದ್ವತ್ಸಂನ್ಯಾಸ. ಮೊದಲನೆಯ ಪ್ರಕರಣವು ಅನೇಕ ಪ್ರಮಾಣಗಳ ಮತ್ತು ದೃಷ್ಟಾಂತಗಳ ಮೂಲಕ ಮೇಲೆ ಸೂಚಿಸಿರುವ ಎರಡು ಬಗೆಯ ಸಂನ್ಯಾಸಗಳನ್ನೂ ಸಾಧಿಸುತ್ತದೆ.

''ಎರಡನೆಯ ಪ್ರಕರಣದಲ್ಲಿ ಜೀವನ್ಮುಕ್ತಿಯ ಸಾಧನಗಳನ್ನು ನಿರೂಪಿಸಿದೆ. ತತ್ತ್ವಜ್ಞಾನ, ಮನೋನಾಶ, ವಾಸನಾಕ್ಷಯ – ಈ ಮೂರೂ ಸಾಧನಗಳು. ವಾಸನೆಯ ಸ್ವರೂಪವನ್ನೂ ಅದನ್ನು ಕ್ಷಯಮಾಡುವ ರೀತಿಯನ್ನೂ ಸರಿಯಾಗಿ ಅರಿತುಕೊಂಡರೆ ಮುಕ್ತಿಯು ದೂರವಾಗಲಾರದು. ಈ ಪ್ರಕರಣದಲ್ಲಿ ವಾಸನಾಕ್ಷಯದ ವಿಷಯವನ್ನು ಅತಿಶಯ ಕೌಶಲದಿಂದ ವಿವರಿಸಿದ್ದಾರೆ ವಿದ್ಯಾರಣ್ಯಮುನಿಗಳು. ನವೀನ ಮನಶ್ಶರೀರಶಾಸ್ತ್ರಜ್ಞನಿಗೂ ಇಲ್ಲಿ ಉಪಯುಕ್ತ ಸೂಚನೆಗಳು ಸಿಗುತ್ತವೆ.

''ಮೂರನೆಯ ಪ್ರಕರಣವು ಮನೋನಾಶದ ಕ್ರಮವನ್ನು ವಿವರಿಸುತ್ತದೆ. ವಾಸನೆಗಳೆಲ್ಲ ಕ್ಷಯಿಸಿದಮೇಲೂ ಅವುಗಳು ಸಂಪೂರ್ಣ ನಾಶವಾಯಿತೆಂದು ಹೇಳಲಾಗುವುದಿಲ್ಲ; ಪುನರುತ್ಥಾನಕ್ಕೆ ಎಡೆಯುಂಟು. ಆದರೆ ಮನೋನಾಶವು ಸರಿಯಾಗಿ ಆದಾಗ ವಾಸನಾಕ್ಷಯವು ರಕ್ಷಿತವಾಗುತ್ತದೆ.

''ಸ್ವರೂಪಸಿದ್ಧಿಯ ಅಥವಾ ಜೀವನ್ಮುಕ್ತಿಯ ಪ್ರಯೋಜನವನ್ನು ನಾಲ್ಕನೆಯ ಪ್ರಕರಣವು ವಿವರಿಸುತ್ತದೆ. ಪ್ರಯೋಜನವು ಐದು ಬಗೆಯಾಗಿರುತ್ತದೆ: ೧) ಜ್ಞಾನದ ರಕ್ಷೆ, ೨) ತಪಸ್ಸು, ೩) ವೈಷಮ್ಯದ ಅಭಾವ, ೪) ದುಃಖನಾಶ ಮತ್ತು ೫) ಸುಖಾವಿರ್ಭಾವ. ತತ್ತ್ವಜ್ಞಾನವು ಪ್ರಮಾಣಗಳಿಂದ ಉತ್ಪನ್ನವಾಗಿದ್ದರೂ ಸಂಶಯ-ವಿಪರ್ಯಯಗಳಿಂದ ಅದನ್ನು ಕಾಪಾಡಬೇಕಾಗುತ್ತದೆ.

''ಐದನೆಯ ಪ್ರಕರಣವು ಪ್ರಾರಂಭಿಸಿದ ವಿಷಯವನ್ನು, ಎಂದರೆ, ಸಂನ್ಯಾಸದ ಸ್ವರೂಪವನ್ನು ಉಪಸಂಹರಿಸುತ್ತದೆ. ವಿಶೇಷವಾಗಿ ವಿದ್ವತ್ಸಂನ್ಯಾಸದ ಸ್ವರೂಪವನ್ನು ವಿವರಿಸುತ್ತದೆ.''

ಕೃತಿಯ ಭಾಷಾಂತರವನ್ನು ಕುರಿತು ಉಪೋದ್ಘಾತದಲ್ಲಿ ಹೀಗೆ ವಿವರಿಸಿದ್ದಾರೆ: ''ಜೀವನ್ಮುಕ್ತಿವಿವೇಕವು ಕನ್ನಡಕ್ಕೆ ಪರಿವರ್ತನವಾಗಿರುವುದು ಇದೇ ಮೊದಲನೆಯ ಸಲ. ಈಗಾಗಲೇ ಅನೇಕ ಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಿಸಿರುವ ಸ್ವಾಮಿ ಹರ್ಷಾನಂದರು ಇದರ ಪರಿವರ್ತನಕಾರರು. ಭಾಷಾಂತರದಲ್ಲಿ ನಿಷ್ಕೃಷ್ಟತೆ, ಸೂಕ್ಷ್ಮತಾದೃಷ್ಟಿ, ಸರಳತೆ, ಪಾಂಡಿತ್ಯ, ಅರ್ಥಗಾಂಭೀರ್ಯ ಎದ್ದು ಕಾಣುತ್ತವೆ. ಇದು ಶುಷ್ಕ ಭಾಷಾಂತರವಾಗಿರದೆ ಸಾಹಿತ್ಯದ ದೃಷ್ಟಿಯಿಂದಲೂ ಲಲಿತವಾಗಿ ಸ್ವರಸವಾಗಿ ಇದೆ. ಅಧ್ಯಾತ್ಮ ಪಿಪಾಸುಗಳಿಗೆ ಈ ಗ್ರಂಥವು ಅತ್ಯಂತ ಉಪಕಾರಿಯಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.''

ಈ ಕೃತಿಯ ಸುಲಲಿತ ಅನುವಾದಶೈಲಿಯನ್ನು 'ವಾಸನಾಕ್ಷಯಪ್ರಕರಣ'ದ ಒಂದು ಉದಾಹರಣೆಯ ಮೂಲಕ ಕಂಡುಕೊಳ್ಳಬಹುದಾಗಿದೆ:

ಮೂಲಕೃತಿ :

**ನ ಖಲು ವಾಯುನಾ ದೋಧೂಯಮಾನೇನ ಪ್ರದೀಪೇನ ಮಣಿಮುಕ್ತಾದಿ-ಲಕ್ಷಣಾನಿ ನಿರ್ಧಾರಯಿತುಂ ಶಕ್ಯಂತೇ । ನಾಪಿ ಸ್ಥೂಲೇನ ಖನಿತ್ರೇಣ ಸೂಚ್ಯೇವ ಸೂಕ್ಷ್ಮಪಟ-ಸ್ಯೂತಿಃ ಸಂಭವತಿ। ತದೇತದೀದೃಶಂ ಸತ್ತ್ವಮೇವಾಯೋಗಿಷು ತಮೋಗುಣಗರ್ಭಿತೇನ ರಜೋಗುಣೇನೋಪಸ್ಪೃಷ್ಟಂ ಬಹುವಿಧ-ದ್ವೈತಸಂಕಲ್ಪೇನ ಚೇತಯಮಾನಂ ಚಿತ್ತಂ ಭವತಿ । ತಚ್ಚಿತ್ತಂ ತಮೋಗುಣಾಧಿಕ್ಯೇ ಸತ್ಯಾಸುರೀಂ ಸಂಪದುಪಚಿನ್ವತ್ಪೀನಂ ಭವತಿ ।**

ಅನುವಾದ :

'ಗಾಳಿಯಿಂದ ಬಹಳವಾಗಿ ಅಲ್ಲಾಡುತ್ತಿರುವ ಮಣಿ, ಮುಕ್ತಾಫಲ ಮೊದಲಾದವುಗಳ ಲಕ್ಷಣಗಳನ್ನು (ಪರೀಕ್ಷಿಸಿ) ನಿರ್ಧರಿಸಲಾಗುವುದಿಲ್ಲ. ಹಾಗೆಯೇ ಸ್ಥೂಲವಾಗಿರುವ ಗುದ್ದಲಿಯಿಂದ—ಸೂಜಿಯಿಂದಾಗುವಂತೆ—ಸೂಕ್ಷ್ಮವಾದ ಬಟ್ಟೆಗಳನ್ನು ಹೊಲಿಯಲಾಗುವುದಿಲ್ಲ. ಯೋಗಿಗಳಲ್ಲದವರಲ್ಲಿ ಇಂಥ ಸತ್ತ್ವವೇ ತಮೋಗುಣದಿಂದ ಮುಚ್ಚಲ್ಪಟ್ಟ ರಜೋಗುಣದ ಸಂಪರ್ಕ ಹೊಂದಿ ಬಹುವಿಧವಾದ ದ್ವೈತಸಂಕಲ್ಪಗಳ ಮೂಲಕ ಚೈತನ್ಯವನ್ನು ಹೊಂದುವ ಚಿತ್ತವಾಗುತ್ತದೆ. ಅಂಥ ಚಿತ್ತವು ತಮೋಗುಣವು ಹೆಚ್ಚಿದಾಗ ಆಸುರೀಸಂಪತ್ತುಗಳ ಸಂಚಯನದ ಮೂಲಕ ವೃದ್ಧಿ ಹೊಂದುತ್ತದೆ.' *(ಪು.೧೪೧-೪೨)*

ಈ ಗ್ರಂಥದಲ್ಲಿ ಹಲವು ಕಡೆ ವಿಷಯಗಳ ಸ್ಪಷ್ಟತೆಗಾಗಿ ಅನೇಕ ಟಿಪ್ಪಣಿಗಳನ್ನು ಅನುವಾದಕರು ನೀಡುತ್ತಾರೆ. ಶಾಸ್ತ್ರಾಧ್ಯಯನದಲ್ಲಿ ಈಗತಾನೇ ತೊಡಗಿರುವವರಿಗೆ ಇದು ಅತ್ಯಂತ ಉಪಯುಕ್ತವಾಗಿದೆ. ಮೂಲಗ್ರಂಥದಲ್ಲಿ ಹೆಚ್ಚು ವಿವರಣೆಗಳು ಲಭ್ಯವಿಲ್ಲದಾಗ, ಇಲ್ಲಿ ನೀಡಿರುವ ಹೆಚ್ಚಿನ ವಿವರಣೆ, ಉದ್ಧರಣೆ, ಪಾರಿಭಾಷಿಕ ಪದ, ಇತರ ದರ್ಶನಗಳ ವಿಚಾರ(ವಿಶೇಷವಾಗಿ ಯೋಗ ದರ್ಶನ) - ಇವು ಹೆಚ್ಚು ಅನುಕೂಲಕರವೂ ಉಪಯುಕ್ತವೂ ಆಗಿವೆ.

ಸಾಮಾನ್ಯ ಓದುಗರೂ ಕೂಡ ಶಾಸ್ತ್ರವಿಚಾರಗಳನ್ನು ಹಾಗೂ ವೇದಾಂತದ ತಿರುಳನ್ನು ಸುಲಲಿತವಾಗಿ ಹಾಗೂ ಸುಸ್ಪಷ್ಟವಾಗಿ ಅರಿತುಕೊಂಡು, ವೇದಾಂತದ ಗಹನ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಸಾಧ್ಯವಾಗಬೇಕೆಂಬ ಉದಾತ್ತ ಆಶಯ ಅನುವಾದಕರ ಈ ಪರಿಶ್ರಮದ ಹಿಂದಿರುವುದು ಕಂಡುಬರುತ್ತದೆ. ಈ ಗ್ರಂಥದಲ್ಲಿ ಮೂಲ ಸಂಸ್ಕೃತದೊಂದಿಗೆ ಕನ್ನಡ ಅನುವಾದ, ವಿವರಣೆಗಳು, ಅಂತೆಯೇ ನಿಖರವಾದ, ಪ್ರೌಢವಾದ ಹಾಗೂ ಉಪಯುಕ್ತವಾದ ಮಾಹಿತಿಗಳಿದ್ದು, ಈ ಕೃತಿ ಹೆಚ್ಚು ಜನಪ್ರಿಯವಾಗಲಿ ಎಂದು ಆಶಿಸುತ್ತೇವೆ. ◆

ಹೊರಗಿನ ಯುದ್ಧಗಳಿಂದ ಏನು ಲಾಭ? ನಿನ್ನೊಳಗೆ ನೀನು ಯುದ್ಧವನ್ನು ಮಾಡು. ತನ್ನನ್ನು ತಾನು ಗೆದ್ದರೆ ಮಾತ್ರ ನಿಜವಾದ ಸುಖ ಪ್ರಾಪ್ತವಾಗುತ್ತದೆ.

ಹೇಗೆ ನಿನಗೆ ದುಃಖವು ಪ್ರಿಯವಲ್ಲವೊ, ಹಾಗೆಯೇ ಎಲ್ಲ ಜೀವಿಗಳಿಗೂ ದುಃಖವು ಪ್ರಿಯವಲ್ಲ - ಹೀಗೆಂದು ತಿಳಿದು ಮತ್ತು ಎಚ್ಚರಿಕೆಯಿಂದ ಎಲ್ಲರನ್ನೂ ತನ್ನಂತೆ ನೋಡುತ್ತ ಎಲ್ಲರ ಮೇಲೂ ದಯೆ ತೋರಿಸು.

ಸಾಧುವಾದವನು ಮಮತ್ವರಹಿತನೂ, ನಿರಹಂಕಾರಿಯೂ, ನಿಸ್ಸಂಗನೂ, ಗೌರವವನ್ನು ತ್ಯಜಿಸಿದವನೂ, ಸ್ಥಾವರ ಹಾಗೂ ಜಂಗಮ ಜೀವಿಗಳೆಲ್ಲದರಲ್ಲಿಯೂ ಸಮಭಾವವನ್ನಿಟ್ಟುಕೊಂಡವನೂ ಆಗಿರುತ್ತಾನೆ.

**- ಭಗವಾನ್ ಮಹಾವೀರ**